**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 481/2025**

| | | | |
|---|---|---|---|
| ಹೆಸರು | | ಶ್ರೀ ಚೆನ್ನಸ್ವಾಮಿನಾಯಕ | ಚಾಸಾಃ 10 |
| ತಂದೆ ಹೆಸರು | | ಶ್ರೀ ಬಿಳಿಗಿರಿ ನಾಯಕ | ಪ್ರಾಸಾಃ 06 |
| ವಯಸ್ಸು | | 50 ವರ್ಷ | ಸಾಕ್ಷಿಯನ್ನು ದಿನಾಂಕಃ 30.12.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಕೋಟೆಕೆರೆ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕೋಟೆಕೆರೆ ಗ್ರಾಮದ ಸಹಕಾರ ಬ್ಯಾಂಕ್ ಹತ್ತಿರ ಸುಮಾರು 6 ತಿಂಗಳ ಹಿಂದೆ ಮಾಡಿರುತ್ತೇನೆ. ಪೊಲೀಸರು ಮಹಜರ್ ಮಾಡಲು ಬಂದಿದ್ದರು, ಆಗ ಸದರಿ ಸಹಿಯನ್ನು ಮಾಡಿರುತ್ತೇನೆ. ಚಾಸಾ–1 ರವರು ಘಟನಾ ಸ್ಥಳವನ್ನು ತೋರಿಸಿದರು. ಆ ಕಾಲಕ್ಕೆ ಸದರಿ ಬ್ಯಾಂಕಿನ ಬೀಗವನ್ನು ಅಮಾನತ್ತುಪಡಿಸಿಕೊಂಡರು. ಸಂಜೆ 6.00 ರಿಂದ 6.30 ರವರೆಗೆ ಮಹಜರ್ ಮಾಡಿರುತ್ತಾರೆ. ಆ ಕಾಲಕ್ಕೆ ಚಾಸಾ–11 ರವರು ಹಾಜರಿದ್ದರು. ಆ ಕಾಲಕ್ಕೆ ನಿಪಿ3 ರಂತೆ ಫೋಟೋ ತೆಗೆದರು. ಮು.ಮಾ.1 ನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 28.03.2025 ರಂದು ಕೋಟೆಕೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಬ್ಯಾಂಕ್ ಹತ್ತಿರ ನಿಪಿ2 ಕ್ಕೆ ಸಹಿ ಮಾಡಿದ್ದೇನೆ. ಸದರಿ ಮಹಜರ್ ನ್ನು ಅಂದು ಸಂಜೆ 6.30 ರಿಂದ 7.15 ರವೆರಗೆ ಮಾಡಲಾಯಿತು ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಘಟನೆಯ ದಿನಾಂಕ ನನಗೆ ಗೊತ್ತಿಲ್ಲ. ಬೀಗ ಹೊಡೆದ ಸಂಬಂಧ ಮಹಜರ್ ಮಾಡಿದರು. ಘಟನೆ ನಡೆದ ಜಾಗದ ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ ನಾನು ಸದರಿ ಬ್ಯಾಂಕ್ ಬಳಿ ಇದ್ದೆ. ನಾನೇ ಸ್ವತಃ ಸದರಿ ಸ್ಥಳದಲ್ಲಿ ಇದ್ದೆ. ಆಗ ಪೊಲೀಸರು ಬಂದಿದ್ದರು. ಅಂದು ಸಂಜೆ 6.30 ರ ಸಮಯಕ್ಕೆ ಫೋಟೋ ತೆಗೆದರು. ಮಹಜರ್ ಆದ ನಂತರ ನನ್ನ ಸಹಿ ಪಡೆದರು. ಮಹಜರ್ ಗೆ ಬರುವಂತೆ ನನಗೆ ನೋಟೀಸ್ ನೀಡಿಲ್ಲ. ಘಟನಾ ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ–ರಾಮಶೆಟ್ಟಿರವರ ಖಾಲಿ ಜಾಗ, ಪಶ್ಚಿಮಕ್ಕೆ–ರಾಮಶೆಟ್ಟಿರವರ ಮಿಲ್ಲು, ಉತ್ತರಕ್ಕೆ–ಆರೋಪಿಯ ದೊಡ್ಡಪ್ಪ ರಾಜಶೆಟ್ಟಿರವರ ಖಾಲಿ ಜಾಗ ಮತ್ತು ದಕ್ಷಿಣಕ್ಕೆ–ರಾಮಶೆಟ್ಟಿರವರ ಜಾಗ. ಸದರಿ ಬೀಗ ಸುಮಾರು ಅರ್ಧ ಕೆ.ಜಿ ಇರಬಹುದು. ಅದು ಹಿತ್ತಾಳೆ ಬೀಗ. ನಾನು ಠಾಣೆಗೆ ಹೋಗಿ ಯಾವುದೆ ಸಹಿ ಮಾಡಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಗ್ರಾಮದಲ್ಲಿ ಪಡೆದರು. ಸಾಕ್ಷಿ ಮುಂದುವೆರದು ಠಾಣೆಯಲ್ಲಿ ಪಡೆದರು ಎಂದು ನುಡಿಯುತ್ತಾರೆ. ಆರೋಪಿಗಳ ಜೊತೆ ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ.

ಆರೋಪಿಗಳ ಕುಟುಂಬವನ್ನು ನಾನು ಶೇಖರ ಎಂಬುವರ ಜೊತೆ ಸೇರಿ ಬಹಿಸ್ಕಾರ ಹಾಕಿದ್ದೇನೆ ಎಂದರೆ ಸರಿಯಲ್ಲ. ಸದರಿ ಸೊಸೈಟಿಯಲ್ಲಿ ನಾನು ಶೇರುದಾರ ಎಂದರೆ ಸರಿ. ಚಾಸಾ–

1 ರವರ ಜೊತೆ ಶಾಮಿಲಾಗಿ ಸೊಸೈಟಿಗೆ ಆರೋಪಿಗಳ ಜಾಗವನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಬೀಗ ಹೊಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಸೊಸೈಟಿಯ ಜಾಗ ಆರೋಪಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**